(22) 2.

Regd No B C. 155 Sn 3—2—1965

48 th Year ನೇ ವರ್ಷ

★

Sri 'Satyavadi

— DAILY —

MYSORE

ಸತ್ಯವಾದಿ

ಸ್ಥಾಪಕರು— ಆರಮನೆ ಬಿಂಕ್ಯೆದಾರ್ ಎಂ ಪಿ ಸಿ.ಬ್ಬರಾಯುರು 2ಪೈ|

ಪ್ರಮು ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ಕಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow

ಗೋಸಂರಕ್ಷಣೆ ಮಾಡಿ

ಅದ್ಭುತ ಶಸ್ತ್ರಚಿಕಿತ್ಸೆ

ಮಾಸ್ಕೋ ನಗರದ ಡಾಕ್ಟರರು 15 ವರ್ಷ ವಯಸ್ಸಿನ ಹುಡುಗಿಯೊಬ್ಬಳ ಮೆದುಳಿನಲ್ಲಿ ಸೇರಿಹೋಗಿದ್ದ ಒಂದು ಸೂಜಿಯನ್ನು ಶಸ್ತ್ರಕ್ರಿಯೆ ಯಿಂದ ತೆಗೆದಿರುವರು : ಹುಡುಗಿಯ ಸ್ಥಿತಿಯು ಸುಧಾರಿಸುತ್ತಲಿದೆ ; ಚಿಕ್ಕಂದಿನಿಂದಲೂ ಈ ಹುಡುಗಿಯು ಆಗಾಗ್ಗೆ ತಲೆನೋವು ಅನುಭವಿಸುತ್ತಿದ್ದು ಮೂರ್ಛೆಹೋಗುತ್ತಿದ್ದಳಂತೆ ; ಇಂಥ ಶಸ್ತ್ರಕ್ರಿಯೆ ಇದೇ ಮೊದಲನೆಯದು ಎನ್ನಲಾಗಿದೆ.

★

ಬಡ್ಜೆಟ್ ಅಧಿವೇಶನ

ಬೆಂಗಳೂರು— ಶಾಸನ ಸಭೆಯ ಬಡ್ಜೆಟ್ ಅಧಿವೇಶನವು ಈ ತಿಂಗಳು 26 ರಿಂದ ಪ್ರಾರಂಭವಾಗುವ ಸಂಭವವಿದೆಯೆಂದೂ, ಅದು ಏಪ್ರಿಲ್ 3 ರವರೆಗೆ ನಡೆಯುವುದೆಂದೂ ಹೇಳಲಾಗಿದೆ.

ಜಿ

ಅದಕ್ಕೊಂದು ಭಂಗಾರದ ಪದಕ

ಗ್ವಾಲಿಯರ್— 41 ವರ್ಷಗಳಿಂದಲೂ ನುಳುತ್ತಿದ್ದು ಜಟಿಲಗೊಳಿಸಿಕೊಳ್ಳಲಿದ್ದು ಮಧ್ಯಪ್ರದೇಶದ ಗೌರ್ನರು ಶ್ರೀ ಪಟ್ಟಾಭ್ಯರಂಗೆ ಬಹುಮಾನ್ಯದವರ ಸಂಘದವರು ಭಂಗಾರದ ಪದಕ ಕೊಡಲು ನಿರ್ಧರಿಸಿರುವರು.

ಕಲ್ಲೀಕೋಟೆ— ಇಡ್ ಮುಬಾರಕ್ ಶುಭಾಶಯಗಳನ್ನು ಎಲ್ಲ ಮುಸ್ಲಿಂ ಮಿತ್ರರಿಗೂ ನೀಡುತ್ತಾ, ಪ್ರಧಾನಿ ಶಾಸ್ತ್ರಿಗಳು ಮುಸ್ಲಿಂ ಲೀಗಿನ ಕಾರ್ಯವನ್ನು ಕಟುವಾಗಿ ಟೀಕಿಸಿದರು.

ಪಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ

ಅಷ್ಟಾವಧಾನ ಮಹಾವಿದ್ವಾನ್ ಧರ್ಮಾಧಿಕಾರಿ ರಾಜಕಾರಣ್ಯಶರ್ಮ, ಜ್ಯೋತಿರ್ವಿದ್ವಸ್ಮಣಿ ಸಂಪತ್ಕುಮಾರ್ ಜೋಯಿಸರಿಂದ

ಈ ಗುರುವಾರ ತದಿಗೆ ಶತಭಿಷ

ಅಧಿಕಾರ ಕಪ್ಪಿದಲು

ಕಾಂಗ್ರೆಸ್ಸನ್ನು ಅಧಿಕಾರದಿಂದ ಚ್ಯುತಿಗೊಳಿಸುವುದೇ ಎಸ್ಸೆಸ್ಪಿಯ ಪ್ರಥಮ ಕಾರ್ಯವಾಗಿದೆ ಎಂದು ನಾಲ್ಕು ದಿನಗಳು ನಡೆದ ಎಸ್ಸೆಸ್ಪಿ ಸಮ್ಮೇಳನದ ಮುಖ್ಯ ನಿರ್ಧಾರವಾಗಿದೆ.

ಜಿ

ದೆಲೆ ಇಳಿಯುತ್ತಿದೆಯೇ ?

ಬೊಂಬಾಯಿ— ಕಳೆದ 2 ವಾರಗಳಿಂದ ವಿವಿಧ ಪದಾರ್ಥಗಳ ಬೆಲೆ ತಕ್ಕಮಟ್ಟಿಗೆ ಇಳಿಯುತ್ತಿದೆಯೆಂದು ಮಹಾರಾಷ್ಟ್ರದ ಆಹಾರ ಮಂತ್ರಿ ಶ್ರೀ ಹೋಎ ತಲವಂಖಾನರು ಹೇಳಿದರು.

★

ಶ್ರೀ ಕೆ ಸಿ ರೆಡ್ಡಿ

ಮಧ್ಯ ಪ್ರದೇಶದ ರಾಜ್ಯಪಾಲರಾಗಿ ನೇಮಿಸಲಾಗಿರುವ ಶ್ರೀ ಕೆ ಸಿ ರೆಡ್ಡಿಯರಿಗೆ ನಿನ್ನೆ ಪಾರಿಸನ್ಮಾನ ನೀಡಲಾಯಿತು - ಅವರು ಗೌರವಾರ್ಥವಾಗಿ ನಿನ್ನೆ ಸಂಚಾರಿ ಭವನದಲ್ಲಿ ಸತ್ಕಾರಕೂಟ ಏರ್ಪಡಿಸಲಾಗಿತ್ತು — ಈ ಬೆಳಿಗ್ಗೆ ಜೇಂಬರ್ ಆಫ್ ಕಾಮರ್ಸ್‌ರವರು ಅವರಿಗೆ ಸತ್ಕಾರ ಏರ್ಪಡಿಸಿದ್ದರು.

ಮಚಲೀಪಟ್ಟಣ— ಮುದಾಸು ಡ್ಯುಸೂರು, ಮತ್ತು ಕೇರಳಕ್ಕೆ ಇಲ್ಲಿಂದ 20 ಸ್ಪಾವರ ಟ್ಟ ಅಕಲು ಅಕ್ಕಿ ಕಳುಹಿಸಲಾಯಿತು.

❀

ಬೆಂಗಳೂರು— ಮಹಾತ್ಮ ಗಾಂಧಿಯವರ ಶತಾಬ್ದಿಯ ಹಿಂಭಾಗದಲ್ಲಿ ಕ್ರಿಕೆಟ್ ಸ್ಟೇಡಿಯಂಗೆ ಸ್ಥಳ ಪಡೆಯಲು ರಕ್ಷಣಾ ಇಲಾಖೆಯೊಡನೆ ಸರಕಾರ ಪತ್ರವ್ಯವಹಾರ ನಡೆಸುತ್ತಿದೆಯೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

★

ಪಾಟ್ನಾ— ಬಿಹಾರ ಬಡ್ಜೆಟ್ ರೂ. 4-29 ಕೋಟಿ ಖೋತಾ ತೋರಿಸುತ್ತದೆ.!

ಪಾಕಿಸ್ತಾನಕ್ಕೆ ಬೆರಿಬೆರಿ ವರ್ಗಾವಣೆಗೆ ತಡೆ

★

ರಾಜಾಜಿ ಹೇಗನ್ನುತ್ತಾರೆ

ಮದರಾಸು— ಹಿಂದೀ ವಿರುದ್ಧ ಚಳವಳಿಯಲ್ಲಿ ಭಾಗವಹಿಸುತ್ತಿರುವ ವಿದ್ಯಾರ್ಥಿಯುವಕರನ್ನು ಕುರಿತು, ರಾಜಾಜಿಯವರು, ಅಶ್ಲೀಲ ಭಾಷೆಯನ್ನು ಉಪಯೋಗಿಸಿ, ನಿಂದಿಸಿ ಗೊಳ್ಳಬೇಡಿ ಎಂದಿರುವರು ; ಅಲ್ಲದೆ ಹಿಂದೀ ವೇರಿಯಿಗಳು ಅದಲ್ಲೂ ಪ್ರಧಾನಿಗಳು ರಾಜಿತ್ಯಾಗದ ಅಧ್ಯಕ್ಷ ಭಾಷಣ ವಿಷಯದ 17 ನೇ ಭಾಗವನ್ನು ಅನಿರ್ದಿಷ್ಟ ಕಾಲ ಸ್ಥಗಿತವಿಯಾಗಿ ನಿಲ್ಲಿಸಿ, ದೇಶದ ತುರ್ತು ಆರ್ಥಿಕ ಮತ್ತು ರಕ್ಷಣಾ ಕಾರ್ಯದಲ್ಲಿ ಮಗ್ನರಾಗಬೇಕೆಂದು ವಿನಂತಿಸಿರುವರು.

ನವದೆಹಲಿ— ಪಾಕಿಸ್ತಾನಕ್ಕೆ ದಕ್ಷಿಣ ಬಂಗಾಳಕ್ಕೆ ಸೇರಿದ ಬೆರೂಬೆರಿ ಭಾಗವನ್ನು ವರ್ಗಾಯಿಸುವ ಬಗ್ಗೆ ಸುಪ್ರೀಂ ಕೋರ್ಟು ತಡೆ ಆಜ್ಞೆಯಿತ್ತಿದೆ : ವಿಚಾರಣೆ ಏಪ್ರಿಲ್ ಕಡೇ ವಾರ ನಡೆಯುವುದು.

1200 ಮಾತೃಭಾಷೆಗಳು !

ಮದರಾಸು— ಭಾರತದಲ್ಲಿ 1200 ಮಾತೃಭಾಷೆಗಳಿವೆಯೆಂದು ಸೆನ್ಸಸ್ಸು ರಿಜಿಸ್ಟ್ರಾರರು ಶ್ರೀ ಆಶೋಕ ಮಿತ್ರರವರು ತಿಳಿಸಿರುವರು.

ಊರಿಗೆ ಉಪದೇಶ

ಉಪದೇಶದಂತೆ ಬೇರೆಯನ್ನೂ ಇತರರಿಗೆ ಕೊಡಲು ಸಾಧ್ಯವಿಲ್ಲವೆನ್ನುವವರೂ ಇದ್ದಾರೆ : ಬಹುಶಃ ಉಪದೇಶವಾದಕೋ ಇತರರಿಗಾಗಿಯೇ ಇದೆಯೋ ಏನೋ ? ಯಾಕೆಂದರೆ ಯಾವಾಗಲೂ ಉಪದೇಶಿಸುವವರು ಅದನ್ನು ಅನುಷ್ಠಾನಕ್ಕೆ ತರುವ ಗೋಜಿಗೆ ಹೋಗುವ ಅವಶ್ಯಕತೆ ಇಲ್ಲವೆಂದಕ ಅದು ಉಪದೇಶಿಸುವುದಕ್ಕಾಗಿಯೇ ಇದೆ ಎಂದು ತಿಳಿದುಕೊಳ್ಳುತ್ತಾರೆಂದೂ ಕಾಣುತ್ತದೆ : ಇದನ್ನು ಇಂದಿನ ಹಾಗೂ ಹಿಂದಿನ ಉಪದೇಶಕರ ಜೀವನದಿಂದ ತೀರ್ಮಾನಿಸಿಕೊಳ್ಳಬಹುದು : ಅಂದರೆ ಕರ್ತವ್ಯಯೋಗಿಗಳು ಇಲ್ಲವೇ ಇಲ್ಲವೆಂದು ಹೇಳುವುದು ಹೇಳುವುದು ಪತ್ಯಕ್ಕೆ ಜಾಸ್ತಿ ದೂರ ಮಾತು ; ಆದರೆ ಈಗಿನ ಕಾಲದಲ್ಲಾಗಲೀ ಉಪದೇಶಿಸುವುದು ಒಂದು ಪಂದ್ಯಾಟವಾಗಿರುತ್ತದೆ : ಇದಕ್ಕೆ ಇಂದಿನ ಪ್ರಧಾನಿಯವರೂ ಅವರಾದವರಾಗಿರುವುದಿಲ್ಲ ; ಹುಸಿ ಜೀವನದಿಂದ ಗ್ರಜೆಗಳು ಸ್ಫೂರ್ತಿ ಪಡೆದು ಕೊಳ್ಳಬೇಕೋ ಅದಂತೆ ನಡೆಯಲು ಪ್ರಯತ್ನಿಸಬೇಕೋ ಆ ಪ್ರಧಾನಿಯವರೂ ಪಂದ್ಯಾಟಕ್ಕೆ ಇಳಿದಿರುವರು ! ಅದಕ್ಕೊಂದು ನಿದರ್ಶನ ಇಲ್ಲಿದೆ.

ಇದೇ ಜನವರಿ ಮುವ್ವತ್ತೊಂದರೊಂದು ಪ್ರಧಾನಿಯವರು ತಿರುವನಂತಪುರಕ್ಕೆ ಹೋಗಿದ್ದರು : ಅಲ್ಲಿಯ ನಗರಸಭೆ ಅವರಿಗೆ ಸುಸ್ವಾಗತವನ್ನಿತ್ತಿತು : ಆಗ ಅವರು ನಗರಸಭೆಯ ಪ್ರತಿನಿಧಿಗಳಿಗೆ ಉಪದೇಶವನ್ನಾಡಿದರು, ಬುದ್ಧಿವಾದ ಹೇಳಿದರು : ನಗರಸಭೆಗೆ ರಾಜಕೀಯ ಪಕ್ಷಗಳ ಮತಿಯಿಂದ ಪ್ರತಿನಿಧಿಗಳು ಆರಿಸಲ್ಪಟ್ಟಿದ್ದರೂ ಕೂಡಾ, ನಂತರ ಅವರು ಪಕ್ಷಗಳ ರಾಜಕೀಯವಲ್ಲಿ ಮುಗ್ಗರಿಸಿದೆ ನಗರಸಭೆಯ ಕಾರ್ಯದಲ್ಲಿ ಭಾಗವಹಿಸಬೇಕೆಂದು ಶ್ರೀ ಲಾಲಬಹದೂರ ಶಾಸ್ತ್ರೀಜಿಯವರು ನಗರಸಭೆಯ ಸದಸ್ಯರಿಗೆ ಹೇಳಿದರು.

ಮುತ್ಸಂಕಹ ಪಾತ್ರಗಳು : ಶ್ರೀ ಅಲಬಹದೂರ್‌ಜೀಯ ವಂತಾದರೋ ರಾಜಕೀಯ ತೊರೆದ ಸನ್ಯಾಸಿಗಳಿಬ್ಬುದಿಲ್ಲ ; ಇವರು ಆ ರಂಗದಲ್ಲಿ ಸಕ್ರಿಯ ಭಾಗವಹಿಸಿದ್ದಾರೆ : ನಗರದ ಪ್ರತಿನಿಧಿಗಳಿಗೆ ಬುದ್ಧಿಹೇಳುವಾಗ ಅವನ್ನು ತಮ್ಮ ಕ್ಷೇತ್ರದ ದೃಷ್ಟಿಯಿಂದ ಅವರು ಹೇಳಬೇಕಾಗಿತ್ತು : ನಗರ ಸಭೆಗೆ ಆರಿಸಲ್ಪಟ್ಟವರು ಮಾತ್ರ ಜನತಾ ಸೇವೆ ಮಾಡಬೇಕೇನು ? ಲೋಕಸಭೆಗೆ ಆರಿಸಲ್ಪಟ್ಟವರು ಅದಂಲ್ಲೂ ಅಧಿಕಾರ ಲಗಾಮನ್ನು ಹಿಡಿದುಕೊಂಡಿರುವವರು ಜನತಾ ಸೇವೆಯ ಕುರಿತು ಯೋಚಿಸಬೇಕಾಗಿಯೂ ಇಲ್ಲವೇನು ? ಪ್ರಧಾನಿಗಳು ಕಾಂಗ್ರೆಸ್ಸು ಪಕ್ಷದ ಸಹಾಯದಿಂದ ಆರಿಸಲ್ಪಟ್ಟಿದ್ದರೂ ಕಾಂಗ್ರೆಸಿನವರಿಗೆ ಮಾತ್ರ ಪ್ರಧಾನಿಗಳಲ್ಲ : ಅವರು ಭಾರತದ ಪ್ರಧಾನಿ ಇದ್ದಾರೆ : ಅವರು ಪಕ್ಷಭೇದವನ್ನು ತೊರೆದು ರಾಷ್ಟ್ರದ ಅಭ್ಯುದಯಕ್ಕೆ ಹೋರಾಡಬೇಕು.

ಚುನಾವಣಾ ಪಂದ್ಯಾಟ ಮುಗಿದಮೇಲೆ ಎಲ್ಲರೂ ವೈಕ್ತಿಯಿಂದಿಂದೇ ಕು, ಪಕ್ಷದ ಜೇಧಭಾವನೆಯನ್ನು ತೊರೆಯಬೇಕು, ಪ್ರಧಾನಿಯವರ ಉಪದೇಶದ ಸಾರಾಂಶವಾದರೂ ಅದೇ ಇದೆ ; ಆದರೆ ಕಾಂಗ್ರೆಸಿಗರು ಇಂದು ಆ ರೀತಿ ನಡೆದುಕೊಳ್ಳುತ್ತಿದ್ದಾರೇನು ? ಕಾಂಗ್ರೆಸ್ಸೇತರರಿಗೆ ಮತಕೊಟ್ಟಿರುವವರು ಪ್ರದೇಶಗಳನ್ನು ವಾಲಕಾಯಿಯು ಊಸರವಳ್ಳಿ ಅವರು ನೋಡಿಕೊಳ್ಳುತ್ತಿಲ್ಲವೇನು ? ಪಂಜಾಬ್ ಪ್ರದೇಶದ ಭಾಷಾವಾರು ತಜಶೀಲಿನ ಮೂರು ಸ್ಥಾನಗಳೂ ಭಾರತೀಯ ಜನಸಂಘದವರಿಗೆ ಹೋಗಿವೆ : ಅಲ್ಲದೆ ಇತ್ತೀಚೆಗೆ ನಡೆದ ಪಂಜಾಬಿನ ಸಭೆ ಚುನಾವಣೆಯಲ್ಲೂ ಭಾರತೀಯ ಜನಸಂಘವೇ ಅಲ್ಲಿ ಗೆದ್ದಿಂತ್ತಿದ್ದಳು; ಅದಂ ಪ್ರತಿಫಲವಾಗಿಯಾದರೂ ಏನು ? ಅಲ್ಲಿನ ಜನತೆಗೆ ಚಿತ್ರಹಿಂಸೆ ! ಹೀಗೆ ಉಪದೇಶ ಮಾಡುವ ಕಾಂಗ್ರೆಸಿಗರು ಈ ರೀತಿ ಮಾಡಬಹುದೇನು ?

ಶ್ರೀ ಅಲಬಹದೂರ್ ಶಾಸ್ತ್ರೀಜೀಯವರಿಗೆ ಈ ವಿಷಯಗಳೆಲ್ಲ ಗೊತ್ತಿಲ್ಲವೇನು ? ಅಥವಾ ಗೊತ್ತಿದ್ದು ಸಭೆಯು ವಾತಾವರಣಕ್ಕನುಸಾರವಾಗಿ ಹಿತೋಪದೇಶವನ್ನಾಡಿಂದರೇ ?

ಅಂತೂ ಹೀಗೆ ಉಪದೇಶ ಕೊಡುವುದು ಬಹಳ ಸುಲಭ, ಆದರೆ ಅದಂತೆ ನಡೆಯುವುದು ಬಹಳ ಕಷ್ಟ !

— ಶಿವಶಂಕರ್

SHAKTI SUDHA

Superb Tonic

ವುಡ್‌ಲಾಂಡ್ 22-1-65 ರಿಂದ
ಶಿಲ್ಪ ಅವೋಧ ಆರಂಭ

ಬೊಂಬಾಯಿನಲ್ಲಿ ಈಗ ಯಶಸ್ವಿಯಾಗಿ 19 ನೇ ವಾರದಲ್ಲಿ ನಡೆಯುತ್ತಿರುವ
ಅಚ್ಚಮೆಚ್ಚಿನ ಕಿಶೋರ್ ಘೋಷ್ ರವರ ಮನಮೋಹಕ ಹಿಂದಿ ಚಿತ್ರ

ದೂರ್‌ಗಗ್ ಕಿ ಚಾವ್‌ಮೇ

ಪಾತ್ರ— ಕಿಶೋರ್‌ಕುಮಾರ್, ಸುಪ್ರಿಯಾ ಚೌಧರಿ, ಮುಕ್ರಿ, ಅಮಿತ ಗಂಗೋಲಿ

[ದಿನವಹಿ 3 ಪ್ರದರ್ಶನಗಳು]

ಆಪೆರಾ 4-2-65 ರಿಂದ

ಉಲ್ಲಾಸ ಪಯಣಂ

[ದಿನ 3 ಆಟಗಳು]

— ಈ ದಿವಸ —

ತಾಯಿಕು ಪಿನ್ ತಾರಂ

ಆಶೋಕಾ ಪಬ್ಲಿಸಿಟೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ನಮ್ಮಲ್ಲಿ ಎಲ್ಲ ಎಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ.

Help The ' Gorakshana '

*

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರಮಾಸಪತ್ರಿಕೆ

ವಾರ್ಷಿಕ ಚಂದಾ 50 ಪೈಸೆ ; ಗೋರಕ್ಷಣ ಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು.

ವಿಳಾಸ- ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4



ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಬಿ ಬಿ ಶಾಸ್ತ್ರಿಗಳು (ದ ಪೈಲ್ವ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore 4